


ಎಪ್ಪತ್ತರ ನೆನಪು: ಮಹಾತ್ಮ ಗಾಂಧಿ ರಸ್ತೆಯ ಕಣ್ಣನ್ ಬಿಲ್ಡಿಂಗ್ ಸುಧಾ ಆರ್ಕೈವ್ಸ್: ಟಿ.ಎಲ್. ರಾಮಸ್ವಾಮಿ

ಇಲ್ಲಿಗೆ ಭೇಟಿ ಕೊಡಲಾರಂಭಿಸಿದಾಗ ಅಂದಿನ ಪಳೆಯುಳಿಕೆಯಾಗಿ ಆಗೀಗ ಚಟ್ಟೆಕಾರ್ ಹೆಂಗಸರು ಕಾಣ ಸಿಗುತ್ತಿದ್ದರು. ಪ್ಲಾಜ, ಲಿಬರ್ಟಿ, ಬಿ.ಆರ್.ವಿ., ರೆಕ್ಸ್, ಇಂಪೀರಿಯಲ್ ಮುಂತಾದ ಚಿತ್ರಮಂದಿರಗಳು ಇದ್ದವು ಮತ್ತು 'ಡೆಕ್ಕನ್ ಹೆರಾಲ್ಡ್', 'ಪ್ರಜಾವಾಣಿ' ಪತ್ರಿಕೆಗಳ ಆಫೀಸ್‌ಗಳು ಇಂದಿಗೂ ಇವೆ.

ಕಳೆದ ಶತಮಾನದ ಐವತ್ತರ ದಶಕದಲ್ಲಿ ವಿಧಾನಸೌಧ ಕಟ್ಟುತ್ತಿದ್ದರು. ವಿಧಾನಸೌಧಕ್ಕೆ ಹತ್ತಿರವಾಗಿ ಪಾರ್ಸಿ ಟೆಂಪಲ್ ಮತ್ತು ಪಾರ್ಸಿಕ್ಲಬ್, ಆ ಕ್ಲಬ್ಬಿನ ಹಿಂಭಾಗದಲ್ಲಿ ಟಾಸ್ಕರ್ ಟೌನ್ ಎಂಬ ಬಡಾವಣೆ – ಬೆಂಗಳೂರು ಸಿಟಿಗೂ, ಅಲ್ಲಿಗೂ ಎಲ್ಲ ವಿಷಯಗಳಲ್ಲಿ ಅಜಗಜಾಂತರ. ಅಲ್ಲಿದ್ದ ಅತ್ತೆ ಮನೆಗೆ ರಜಾ ಕಾಲದಲ್ಲಿ ಬಂದು ಬಿಟ್ಟರೆ ಸಾಕು, ನಮ್ಮೂರಿನ ಅಚ್ಚಗನ್ನಡದಿಂದ ಇಂಗ್ಲಿಷ್, ತಮಿಳು, ಹಿಂದಿ ಇತ್ಯಾದಿ ಒಂದು 'ಚೌ ಚೌ' ಭಾಷೆಗಳ ಲೋಕ. ಅತ್ತೆ ಮಗಳು ಅಲ್ಲಿನ 'ಚೌ ಚೌ' ಭಾಷೆಗಳಲ್ಲಿ ಸಲೀಸಾಗಿ ಮಾತಾಡುತ್ತಿದ್ದಳು. ಬೇರೆ ಊರಿನಿಂದ ಬೆಂಗಳೂರಿಗೆ ಬರುತ್ತಿದ್ದ ನನಗೆ ಕಂಟೋನ್ಮೆಂಟ್ ಅಚ್ಚರಿಗಳ ಮಾಯಾಲೋಕ. ಅನೇಕ ಹೊಸ ಅನುಭವಗಳ ನಲ್ದಾಣ. ಅತ್ತೆ ಮನೆ ಹತ್ತಿರವಿದ್ದ ಒಂದು ಚಿಕ್ಕ ಪಾರ್ಕ್, ಅಲ್ಲೊಂದು ರಿಕ್ಷಾ ನಿಲ್ದಾಣ. ಅದು ಮನುಷ್ಯರನ್ನು ಹೊತ್ತು ಮನುಷ್ಯರೇ ರಿಕ್ಷಾವನ್ನು ಎಳೆದುಕೊಂಡು ಒಂದು ಕಡೆಯಿಂದ ಮತ್ತೊಂದು ಕಡೆಗೆ ಓಡುತ್ತಿದ್ದ ವಾಹನ. ಇದು ಬಾಂಬೆ, ಮದ್ರಾಸ್‌ಗಳಲ್ಲೂ ಇತ್ತು. ಬರಿಗಾಲಿನ ಕಪ್ಪು ದೇಹಗಳು ಮನುಷ್ಯನನ್ನು ಹೊತ್ತು ರಿಕ್ಷಾವನ್ನು ಎಳೆದುಕೊಂಡು ಓಡುತ್ತಿದ್ದ ಅಂದಿನ ಆ ದೃಶ್ಯ, ಇಂದು ನೆನೆದಾಗ ತುಂಬಾ ಕಸಿವಿಸಿಯಾಗುತ್ತದೆ. ನಂತರ ಬಂತು ಸೈಕಲ್‌ರಿಕ್ಷಾ. ರಿಕ್ಷಾದಲ್ಲಿ ಗಿರಾಕಿಯನ್ನು ಕೂರಿಸಿ, ರಿಕ್ಷಾದವನು ಸೈಕಲ್ ತುಳಿದಂತೆ ತುಳಿದುಕೊಂಡು ಗಮ್ಯಸ್ಥಾನ ತಲುಪುತ್ತಿದ್ದ. ಕ್ರಮೇಣ 1955ರ ಹೊತ್ತಿಗೆ ಬಂತು ನೋಡಿ! ಆಟೊ ರಿಕ್ಷಾ, ಮಿನಿಮಮ್ 50 ಪೈಸಾ! ಇದು ಜೀರುಂಡೆಯಂತೆ ಶಬ್ದ ಮಾಡುತ್ತ ಬಡಾವಣೆಗಳಲ್ಲೆಲ್ಲಾ ತಿರುಗಿ, ಎಲ್ಲರಿಗೂ ಬೇಕಾದ ವಾಹನವಾಯ್ತು, ಅಂದಿನಿಂದ ಇಂದಿನವರೆಗೆ.

ಪಾರ್ಸಿ ಟೆಂಪಲ್‌ಗೆ ಹತ್ತಿರವಾಗಿ ವಿಧಾನಸೌಧದ ಕಟ್ಟುವಿಕೆ ನಡೆಯುತ್ತಲಿದ್ದು, ಅಲ್ಲಿ ಆಗಲೇ ಆಫೀಸುಗಳು ಶುರುವಾಗಿ, ಮಾವ ಅಲ್ಲಿನ ತಮ್ಮ ಆಫೀಸಿಗೆ ಕಾರಿನಲ್ಲಿ ಹೋಗುತ್ತಿದ್ದರು. ಅರೆಬರೆ ಕಟ್ಟುತ್ತಿದ್ದ ವಿಧಾನಸೌಧದ ಎದುರಿಗೆ ಎರಡು ಸರ್ಕಾರಿ ಕೆಂಪು ಕಟ್ಟಡಗಳಿದ್ದವು. ಅವುಗಳಲ್ಲೊಂದು ಸರ್ಕಾರದ ಇನ್‌ಶೂರೆನ್ಸ್ ಡಿಪಾರ್ಟ್‌ಮೆಂಟ್‌ಗೆ ಸೇರಿತ್ತು. ಈ ಆಫೀಸಿಗೆ ಮಾತ್ರ ಲಿಫ್ಟ್ ಸೌಲಭ್ಯವಿತ್ತು. ನಮ್ಮ ತಂದೆಯವರು ನನಗೆ ಲಿಫ್ಟ್‌ನಲ್ಲಿ ಮೇಲೆ ಹೇಗೆ ಹೋಗುವುದು, ಕೆಳಕ್ಕೆ ಬರುವುದು ಹೇಗೆ ಎಂಬುದರ ಪ್ರಾತ್ಯಕ್ಷಿಕೆ ನಡೆಸಿದರು. ಇಂದಿಗೂ ಅಂದಿಗೂ ಲಿಫ್ಟ್ ಸೌಲಭ್ಯ ಹೇಗಿದೆ ನೋಡಿ! ಗೆಳತಿಯಾದ ಅತ್ತೆ ಮಗಳು ಮತ್ತು ನಾನು ಅವರ ಮನೆಯ ಮಹಡಿಯ ಮೇಲಿನ ಬಾಲ್ಕನಿಯ ಫ್ರೆಂಚ್ ಕಿಟಕಿಗಳನ್ನು ತೆರೆದು ಎದುರು ಸಾಲಿನ ಮನೆಗಳಲ್ಲಿದ್ದ ಪಾರ್ಸಿ ಯುವಕ, ಯುವತಿಯರಾದ ಓಮಿ, ಓಮೈರ ಓಡಾಟ, ಮಾತುಕತೆಯನ್ನು ಗಮನಿಸುವುದು; ಯಹೂದಿ ವಿಕ್ಟೋರಿಯಾ, ಯಾಕೆ ಅರಬ್ ಸ್ನೇಹಿತನೊಡನೆ ಗಹಗಹಿಸಿ ನಗುತ್ತಿದ್ದಾಳೆ? ಕೇಕಿ ಏಕೆ ಒಬ್ಬನೇ ಯೋಚಿಸುತ್ತ ಗೇಟನ್ನು ಒರಗಿ ನಿಂತಿದ್ದಾನೆ? ಎಂದು ನಿರುಕಿಸಿ ನೋಡುವ ವಯಸ್ಸಿಗೆ ಸಹಜವಾದ ಸ್ವಲ್ಪ ಹೆಚ್ಚಿನ ಕುತೂಹಲ! ಪ್ರತಿ ಭಾನುವಾರ ಬೆಳಿಗ್ಗೆ ಬೀದಿಯಲ್ಲಿ ಟಕ್... ಟಕ್ ಎಂಬ ಶಬ್ದ. ಶಬ್ದವನ್ನು ಕೇಳಿದೊಡನೆ ನಾನು ಅತ್ತೆ ಮಗಳಿಗೆ ಮೆಲ್ಲನೆ 'ಲೇ, ದ್ರವ್ಯ ದ್ವೀಪದ ನಾವಿಕ ಬರುತ್ತಿದ್ದಾನೆ' ಎನ್ನಲು ಅವಳು, 'ಬಾಯಿ ಮುಚ್ಕಂಡು ಸುಮ್ನೆ ನೋಡೆ' ಎನ್ನುವ ಹೊತ್ತಿಗೆ ಊರುಗೋಲು ಊರಿಕೊಂಕು ಟಕ್, ಟಕ್ ಎಂಬ ಶಬ್ದದೊಡನೆ ಬಂದವನು